ಅಶೋಕನಗರ ಪೊಲೀಸ್ ಠಾಣೆ,
ಬೆಂಗಳೂರು ನಗರ, ದಿ:05.12.2019

# ಪೊಲೀಸ್ ನೋಟೀಸ್

ಈ ಮೂಲಕ ನಿಮಗೆ ತಿಳಿಯಪಡಿಸುವುದೇನೆಂದರೆ, ನಿಮ್ಮ ಚರ್ಚ್‌ನ ಸದಸ್ಯರಾದ ಶ್ರೀ ಎಬಿನೈಜರ್ ಪ್ರೇಮ್ ಕುಮಾರ್ & ರೋನಾಲ್ಡ್ ಫರ್ನಾಂಡೀಸ್ ಹಾಗೂ ಇತರರು ತಮ್ಮ ಆಲ್ ಸೈಂಟ್ಸ್ ಚರ್ಚ್‌ಗೆ ಸಂಬಂಧಿಸಿದ ಜಾಗವನ್ನು ಬಿ.ಎಂ.ಆರ್.ಸಿ.ಎಲ್ ರವರು ಮೆಟ್ರೋ ಕಾಮಗಾರಿ ಸಂಬಂಧ ಹೆಚ್ಚುವರಿಯಾಗಿ ಒತ್ತುವರಿ ಮಾಡಿಕೊಂಡಿರುತ್ತಾರೆಂದು, ಇದನ್ನು ವಿರೋಧಿಸಿ ದಿನಾಂಕ. 08.12.2019 ರಂದು ಆಲ್ ಸೈಂಟ್ಸ್ ಚರ್ಚ್‌ಗೆ ಹೊರಗಡೆ ಪ್ರತಿಭಟನಾ ಮಾನವ ಸರಪಳಿ ಕಾರ್ಯಕ್ರಮ ನಡೆಸಲು ಅನುಮತಿ ಕೋರಿ ಮಾನ್ಯ ಎ.ಸಿ.ಪಿ.ಕಬ್ಬನ್ ಪಾರ್ಕ್ ಉಪ ವಿಭಾಗ ರವರ ಕಛೇರಿಗೆ ಅರ್ಜಿಸಲ್ಲಿಸಿರುತ್ತಾರೆ, ದಿನಾಂಕ:23.06.2019 ರಂದು ಇದೇ ವಿಚಾರವಾಗಿ ಸುಮಾರು 200 ಜನರು ಸೇರಿಕೊಂಡು ಸಂಚಾರದಟ್ಟಣೆ ಇರುವ ಹೊಸೂರು ರಸ್ತೆಯಲ್ಲಿ ವಾಹನಗಳ ಸಂಚಾರಕ್ಕೆ ಹಾಗೂ ಸಾರ್ವಜನಿಕರ ಓಡಾಟಕ್ಕೆ ತೊಂದರೆಯುಂಟು ಮಾಡಿದ್ದು ಆ ಸಮಯದಲ್ಲಿ ಪೊಲೀಸರು ಸ್ಥಳಕ್ಕೆ ಬಂದು ಯಾವುದೇ ಅಹಿತಕರ ಘಟನೆಗಳು ಜರುಗದಂತೆ ಅಗತ್ಯ ಕ್ರಮ ಕೈಗೊಳ್ಳಲಾಗಿತ್ತು. ಸದರಿ ಜಾಗಕ್ಕೆ ಸಂಬಂಧಪಟ್ಟಂತೆ ಚರ್ಚ್ ಮತ್ತು ಸಿ.ಎಂ.ಪಿ ಸೆಂಟರ್ [ಮಿಲಿಟರಿ] ರವರ ನಡುವೆ ವಿವಾದವಿದ್ದು, ಈ ಸಂಬಂಧ ಅಶೋಕನಗರ ಪೊಲೀಸ್ ಠಾಣೆಯಲ್ಲಿ ಮೊ.ಸಂ.262/2019 ಕಲಂ 420 ಐ.ಪಿ.ಸಿ ರೀತ್ಯಾ ಪ್ರಕರಣ ದಾಖಲಾಗಿ ತನಿಖಾ ಹಂತದಲ್ಲಿರುತ್ತದೆ.

ಹೀಗಿರುವಾಗ ನಿಮ್ಮ ಮೇಲ್ಕಂಡ ಚರ್ಚ್‌ನ ಸದಸ್ಯರು ಪುನಃ ಅದೇ ಸ್ಥಳದಲ್ಲಿ ದಿನಾಂಕ. 08.12.2019 ರಂದು ಪ್ರತಿಭಟನಾ ಮಾನವ ಸರಪಳಿ ಕಾರ್ಯಕ್ರಮ ನಡೆಸಲು ಅನುಮತಿ ಕೋರಿದ್ದು, ಸದರಿಯವರಿಗೆ ಅನುಮತಿಯನ್ನು ನಿರಾಕರಿಸಿ, ಫ್ರೀಡಂ ಪಾರ್ಕ್, ಟೌನ್ ಹಾಲ್,ಬನ್ನಪ್ಪ ಪಾರ್ಕ್ ಸ್ಥಳವನ್ನು ಆಯ್ಕೆ ಮಾಡಿಕೊಂಡು ಪ್ರತಿಭಟನೆ ನಡೆಸಲು ಮಾನ್ಯ ಉಪ ಪೊಲೀಸ್ ಕಮೀಷನರ್ ಕೇಂದ್ರ ವಿಭಾಗ ರವರಿಂದ ಅನುಮತಿ ಪಡೆದು ಪ್ರತಿಭಟನೆ ಮಾಡಬಹುದೆಂದು, ಅನುಮತಿಯಿಲ್ಲದೇ ಹೊಸೂರು ರಸ್ತೆ ಆಲ್‌ಸೈಂಟ್ಸ್ ಚರ್ಚ್ ಬಳಿ ಮಾನವ ಸರಪಳಿಯ ಪ್ರತಿಭಟನೆ ನಡೆಸಿದಲ್ಲಿ ನಿಮ್ಮಗಳ ವಿರುದ್ಧ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುವುದು ಎಂಬ ನೋಟಿಸ್ ಅನ್ನು ನಿಮ್ಮ ಮೇಲ್ಕಂಡ ಚರ್ಚ್‌ನ ಸದಸ್ಯರುಗಳಿಗೆ ಜಾರಿ ಮಾಡಿರುತ್ತದೆ.

ಆದುದರಿಂದ ತಾವು ಸಹಾ ಸದರಿ ಪ್ರತಿಭಟನೆಯ ವಿಚಾರವಾಗಿ ಮುಂಜಾಗ್ರತಾ ಕ್ರಮಕೈಗೊಂಡು, ಆಲ್ ಸೈಂಟ್ಸ್ ಚರ್ಚ್‌ನ ಒಳಭಾಗದಲ್ಲಾಗಲೀ ಹಾಗೂ ಚರ್ಚ್‌ನ ಸುತ್ತಮುತ್ತಲಿನ ರಸ್ತೆಗಳಲ್ಲಿ ಪ್ರತಿಭಟನೆ ನಡೆಸದಂತೆ ತಮ್ಮ ಚರ್ಚ್‌ನ ಸದಸ್ಯರುಗಳಿಗೆ ಸೂಚಿಸಬೇಕೆಂದು ಈ ಮೂಲಕ ಕೋರಿದೆ.

ರವರಿಗೆ
ಫಾದರ್ ಶ್ರೀ ಸತೀಶ್ ಹಿಮತಿಪಾಲ್,
ಆಲ್‌ಸೈಂಟ್ಸ್ ಚರ್ಚ್
ವೆಲ್ಲಾರ ಜಂಕ್ಷನ್, ಹೊಸೂರು ರಸ್ತೆ
ಬೆಂಗಳೂರು ನಗರ

9686014933
08025512289

ಹುಂನಾಥ
9880034150

ಪೊಲೀಸ್ ಇನ್ಸ್‌ಪೆಕ್ಟರ್ ...
ಅಶೋಕನಗರ ಪೊಲೀಸ್ ಠಾಣೆ.
ಬೆಂಗಳೂರು-560 025

ALL SAINTS' CHURCH
#1, Hosur Road, B'lore-25

Received
06/12/2019